# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **902**

ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11-03-2026

| | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ನಗರ ಸೇರಿದಂತೆ ರಾಜ್ಯಾದ್ಯಂತ ಖಾಸಗಿ ವಾಹನಗಳಲ್ಲಿ ಅಕ್ರಮವಾಗಿ ಎಲ್‌ಇಡಿ ಬಾರ್‌ಗಳು(LED Bars), ಹೈ-ಇಂಟೆನ್ಸಿಟಿ ಹೆಡ್‌ಲೈಟ್ ಗಳು ಮತ್ತು ಸೈರನ್ ಮಾದರಿಯ ಫ್ಲ್ಯಾಷರ್ ದೀಪಗಳನ್ನು ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಕೆಲವು ಖಾಸಗಿ ವಾಹನಗಳಲ್ಲಿ ಅಕ್ರಮವಾಗಿ ಎಲ್‌ಇಡಿ ಬಾರ್‌ಗಳು(LED Bars), ಹೈ-ಇಂಟೆನ್ಸಿಟಿ ಹೆಡ್‌ಲೈಟ್ ಗಳು ಮತ್ತು ಸೈರನ್ ಮಾದರಿಯ ಫ್ಲ್ಯಾಷರ್ ದೀಪಗಳನ್ನು ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| (ಆ) | ಕಳೆದ ಆರು ತಿಂಗಳಲ್ಲಿ ಇಂತಹ ಅಕ್ರಮ ದೀಪಗಳನ್ನು ಅಳವಡಿಸಿಕೊಂಡ ವಾಹನಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳೆಷ್ಟು ಮತ್ತು ವಸೂಲಿ ಮಾಡಲಾದ ದಂಡದ ಮೊತ್ತವೆಷ್ಟು; (ನಗರವಾರು ವಿವರ ನೀಡುವುದು) | ಸಾರಿಗೆ ಇಲಾಖೆಯಿಂದ ಕಳೆದ ಆರು ತಿಂಗಳಲ್ಲಿ ಇಂತಹ ಅಕ್ರಮ ದೀಪಗಳನ್ನು ಅಳವಡಿಸಿಕೊಂಡ ವಾಹನಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳು ಮತ್ತು ವಸೂಲಿ ಮಾಡಲಾದ ದಂಡದ ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. ಮುಂದುವರೆದು ಇಂತಹ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆಯಿಂದ ವಸೂಲಿ ಮಾಡಲಾದ ದಂಡದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| (ಇ) | ಪ್ರಖರವಾದ ಎಲ್‌ಇಡಿ ಬೆಳಕಿನಿಂದ ಎದುರುಗಡೆ ಬರುವ ಚಾಲಕರ ಕಣ್ಣು ಕೋರೈಸಿ (Glare) ಸಂಭವಿಸುತ್ತಿರುವ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕೈಗೊಂಡಿರುವ ಕ್ರಮಗಳೇನು? | ಪ್ರಖರವಾದ ಎಲ್‌ಇಡಿ ಬೆಳಕಿನಿಂದ ಎದುರುಗಡೆ ಬರುವ ಚಾಲಕರ ಕಣ್ಣು ಕೋರೈಸಿ ಅಪಘಾತಗಳು ಹೆಚ್ಚುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕರ್ನಾಟಕ ಮೋಟಾರು ವಾಹನಗಳ ನಿಯಮ 215 ರ ಪ್ರಕಾರ ಇತರೆ ವಾಹನ ಚಾಲಕರಿಗೆ ಅಪಾಯಕಾರಿ ರೀತಿಯಲ್ಲಿ ಅತಿ ಪ್ರಕಾಶಮಾನ ಬೆಳಕು ಬೀರುವ ದೀಪಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ನಗರ ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು ಗೆಜೆಟ್ ಅಧಿಸೂಚನೆ ಹೊರಡಿಸುವುದರ ಮೂಲಕ ಇಂತಹ ದೀಪಗಳ ಬಳಕೆಯನ್ನು ನಿರ್ಬಂಧಿಸಲು KMV Rules 1989 ರ ನಿಯಮ 215 (2) ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಪೊಲೀಸ್ ಇಲಾಖೆಯಿಂದ, ಹೆಚ್ಚುವರಿಯಾಗಿ ಎಲ್ ಇ ಡಿ ದೀಪಗಳನ್ನು ಅಳವಡಿಸಿಕೊಂಡಿರುವ ವಾಹನಗಳ ವಿರುದ್ಧ ಕಾಲ ಕಾಲಕ್ಕೆ ನಿರಂತರವಾಗಿ ವಿಶೇಷ ಕಾರ್ಯಾಚರಣೆಗಳನ್ನು ಕೈಗೊಂಡು ಮೋಟಾರು ವಾಹನಗಳ ಕಾಯ್ದೆಯಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡಲಾಗಿರುತ್ತದೆ. |

| | ಪ್ರಶ್ನೆ | ಉತ್ತರ |
|---|---|---|
| | | ಸದರಿ ನಿಯಮಗಳನ್ನು ಉಲ್ಲಂಘಿಸುವ ಚಾಲಕರಿಗೆ ಪ್ರಕರಣಗಳನ್ನು ದಾಖಲಿಸುವ ಸಮಯದಲ್ಲಿ ಎಲ್ ಇ ಡಿ ದೀಪಗಳ ಅಳವಡಿಕೆಯಿಂದ ಉಂಟಾಗುವ ಅನಾಹುತಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br><br>ಸಾಮಾಜಿಕ ಜಾಲತಾಣಗಳ ಮೂಲಕ ಎಲ್ ಇ ಡಿ ದೀಪಗಳ ಅಳವಡಿಕೆಯಿಂದ ಉಂಟಾಗುವ ಅನಾಹುತಗಳ ಬಗ್ಗೆ ದೀಪಗಳನ್ನು ಬಳಸದಂತೆ ಅರಿವು ಮೂಡಿಸುವ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. |
| ಈ) | ಜನಪ್ರತಿನಿಧಿಗಳು, ನಿವೃತ್ತ ಅಧಿಕಾರಿಗಳು ಮತ್ತು ರಾಜಕೀಯ ಪ್ರಭಾವಿಗಳು ತಮ್ಮ ವಾಹನಗಳ ಮೇಲೆ ಅಕ್ರಮವಾಗಿ ಕೆಂಪು/ನೀಲಿ ದೀಪಗಳನ್ನು ಬಳಸಿ 'ವಿಐಪಿ ಸಂಸ್ಕೃತಿ' ಪ್ರದರ್ಶಿಸುತ್ತಿರುವುದು ಸಂಚಾರ ನಿಯಮಗಳ ಉಲ್ಲಂಘನೆಯಲ್ಲವೇ; ಇಂತಹ ಪ್ರಭಾವಿಗಳ ವಿರುದ್ಧ ಕ್ರಮ ಜರುಗಿಸಲು ಪೊಲೀಸರಿಗೆ ಮುಕ್ತ ಅವಕಾಶ ನೀಡಲಾಗಿದೆಯೇ: | ಸರ್ಕಾರದ ಆದೇಶ ಸಂಖ್ಯೆ ಸಾರಿಇ 114 ಸಾಇಪ 2017, ಬೆಂಗಳೂರು ದಿನಾಂಕ:12.10.2017 ರಲ್ಲಿ ಅಗ್ನಿಶಾಮಕ ಕರ್ತವ್ಯವನ್ನು ನಿರ್ವಹಿಸುವ ವಾಹನಗಳು ಕಾನೂನು ಸುವ್ಯವಸ್ಥೆ ನಿರ್ವಹಣೆಗೆ ಸಂಬಂಧಿಸಿದ ಪೊಲೀಸ್ ರಕ್ಷಣಾ ಪಡೆ ಅಥವಾ ಅರೆಸೇನಾ ಪಡೆ ಅಧಿಕಾರಿಗಳ ವಾಹನಗಳ ಮೇಲೆ ಮಾತ್ರ ಕೆಂಪು/ನೀಲಿ ಮತ್ತು ಬಿಳಿ ಬಣ್ಣ ದೀಪಗಳನ್ನು ಅಳವಡಿಸಿಕೊಳ್ಳಲು ಅನುಮತಿಸಿದ್ದು, ಉಳಿದಂತೆ ಜನಪ್ರತಿನಿಧಿಗಳು, ನಿವೃತ್ತ ಅಧಿಕಾರಿಗಳು ಮತ್ತು ರಾಜಕೀಯ ಪ್ರಭಾವಿಗಳು ತಮ್ಮ ವಾಹನಗಳ ಮೇಲೆ ಬಹುವರ್ಣದ ದೀಪಗಳನ್ನು ಅಳವಡಿಸಿಕೊಳ್ಳುವುದು ನಿಯಮ ಉಲ್ಲಂಘನೆಯಾಗಿರುತ್ತದೆ. ಒಂದು ವೇಳೆ ಈ ರೀತಿ ಅನಧಿಕೃತವಾಗಿ ಬಹುವರ್ಣದ ದೀಪಗಳನ್ನು ಅಳವಡಿಸಿಕೊಂಡಿರುವ ವಾಹನಗಳು ಕಂಡು ಬಂದರೆ ಪರಿಶೀಲಿಸಿ ಅಂತಹ ದೀಪಗಳನ್ನು ತೆರವುಗೊಳಿಸಲು ಕಾನೂನು ರೀತ್ಯಾ ಕ್ರಮವಹಿಸಲಾಗುತ್ತಿದೆ. |
| ಉ) | ಕೇವಲ ದಂಡ ವಿಧಿಸುವುದಷ್ಟೇ ಅಲ್ಲದೆ, ಅಕ್ರಮ ದೀಪಗಳನ್ನು ಮಾರಾಟ ಮಾಡುವ ಮತ್ತು ಅಳವಡಿಸುವ ಆಟೋ-ಮೊಬೈಲ್ ಶಾಪ್‌ಗಳ ವಿರುದ್ಧ ಶಾಶ್ವತವಾಗಿ ರದ್ದುಪಡಿಸುವಂತಹ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಪ್ರಸ್ತುತ ಅಂತಹ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |

**ಟಿಡಿ 16 ಟಿಡಿಕ್ಯೂ 2026**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.

ಅನುಬಂಧ-1

## ಕಳೆದ 06 ತಿಂಗಳಲ್ಲಿ ಅಕ್ರಮ ದೀಪಗಳನ್ನು ಅಳವಡಿಸಿಕೊಂಡ ವಾಹನಗಳ ವಿರುದ್ಧ ದಾಖಲಿಸಿರುವ ಪ್ರಕರಣಗಳ ವಿವರಗಳು

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ದಾಖಲಿಸಿದ ಪ್ರಕರಣ | ವಸೂಲಿಸಿದ ದಂಡ |
|---|---|---|---|
| 1 | ಬೆಂಗಳೂರು ನಗರ | 439 | 6,60,500 |
| 2 | ಬೆಂಗಳೂರು (ಗ್ರಾ) | 83 | 14,500 |
| 3 | ಮೈಸೂರು | 41 | 19,300 |
| 4 | ಹುಬ್ಬಳ್ಳಿ-ಧಾರವಾಡ | 105 | 1,05,000 |
| 5 | ಮಂಗಳೂರು | 59 | 13,700 |
| 6 | ಬೆಳಗಾವಿ | 796 | 4,18,150 |
| 7 | ಕಲಬುರ್ಗಿ | 645 | 3,22,500 |
| 8 | ಕೋಲಾರ | 115 | 69,000 |
| 09 | ತುಮಕೂರು | 492 | 2,25,500 |
| 10 | ರಾಮನಗರ | 25 | 12,000 |
| 11 | ಚಿಕ್ಕಬಳ್ಳಾಪುರ | 45 | 1,14,500 |
| 12 | ಮಂಡ್ಯ | 337 | 1,05,000 |
| 13 | ಹಾಸನ | 103 | 4,77,000 |
| 14 | ಚಾಮರಾಜನಗರ | 25 | 5,000 |
| 15 | ಕೊಡಗು | 12 | 6,000 |
| 16 | ಉತ್ತರ ಕನ್ನಡ | 256 | 1,47,000 |
| 17 | ಚಿಕ್ಕಮಗಳೂರು | 05 | - |
| 18 | ಉಡುಪಿ | 04 | 1,500 |
| 19 | ದಾವಣಗೆರೆ | 118 | 59,000 |
| 20 | ಚಿತ್ರದುರ್ಗ | 21 | 7,000 |
| 21 | ಶಿವಮೊಗ್ಗ | 17 | 6,500 |
| 22 | ಹಾವೇರಿ | 89 | 18.000 |
| 23 | ಬಿಜಾಪುರ | 198 | 76,000 |
| 24 | ಬಾಗಲಕೋಟೆ | 64 | 24,500 |
| 25 | ಗದಗ | 61 | 51,000 |
| 26 | ಬೀದರ್ | 188 | 1,08,500 |
| 27 | ಯಾದಗೀರ್ | 62 | 32,000 |
| 28 | ರಾಯಚೂರು | 135 | 4,38,000 |
| 29 | ಕೊಪ್ಪಳ | 253 | 1,26,500 |
| 30 | ಬಳ್ಳಾರಿ | - | - |
| 31 | ವಿಜಯನಗರ | 143 | 71,500 |
| | ಒಟ್ಟು | 4936 | 37,93,150 |

ಅಪರ ಸಾರಿಗೆ ಆಯುಕ್ತರು, (ಪ್ರ) (ದ)
ಬೆಂಗಳೂರು

## ಅನುಬಂಧ-೨

| ಕ್ರ. ಸಂ | ಘಟಕಗಳ ಹೆಸರು | ಅಕ್ಟೋಬರ್ 2025 - ಫೆಬ್ರವರಿ 2026 | | ಅಕ್ಟೋಬರ್ 2025 - ಫೆಬ್ರವರಿ 2026 | |
|---|---|---|---|---|---|
| | | ಖಾಸಗಿ ವಾಹನಗಳಲ್ಲಿ ಅಕ್ರಮವಾಗಿ ಎಲ್ ಇಡಿ ಬಾರ್‌ಗಳು ಹೈ ಇಂಟೆನ್ಸಿಟಿ ಹೆಡ್ ಲೈಟ್ ಗಳ ವಿರುದ್ಧ ದಾಖಲಾದ ಪ್ರಕರಣಗಳ ಸಂಖ್ಯೆ | ವಸೂಲಿ ಮಾಡಲಾದ ದಂಡದ ಮೊತ್ತವೆಷ್ಟು | ಖಾಸಗಿ ವಾಹನಗಳಲ್ಲಿ ಅಕ್ರಮವಾಗಿ ಸೈರನ್ ಮಾದರಿಯ ಫ್ಲ್ಯಾಷರ್ ದೀಪಗಳನ್ನು ಬಳಸುತ್ತಿರುವುದರ ವಿರುದ್ಧ ದಾಖಲಾದ ಪ್ರಕರಣದ ಸಂಖ್ಯೆ | ವಸೂಲಿ ಮಾಡಲಾದ ದಂಡದ ಮೊತ್ತವೆಷ್ಟು |
| 1 | Bangalore City | 3025 | 1522000 | 0 | 0 |
| 2 | Mysore City | 27 | 13500 | 0 | 0 |
| 3 | Hubli Dharwad City | 446 | 220900 | 0 | 0 |
| 4 | Mangalore City | 19 | 9500 | 0 | 0 |
| 5 | Belagavi City | 0 | 0 | 0 | 0 |
| 6 | Kalaburagi City | 168 | 84000 | 0 | 0 |
| 7 | Bengaluru Dist. | 2 | 100 | 0 | 0 |
| 8 | Kolar Dist. | 0 | 0 | 0 | 0 |
| 9 | K.G.F | 23 | 11500 | 0 | 0 |
| 10 | Tumkur Dist. | 73 | 42500 | 0 | 0 |
| 11 | Ramanagara Dist. | 10 | 5000 | 0 | 0 |
| 12 | Chikkaballapura Dist. | 208 | 105700 | 0 | 0 |
| 13 | Mysore Dist. | 0 | 0 | 0 | 0 |
| 14 | Mandya Dist. | 17 | 8500 | 0 | 0 |
| 15 | Hassan Dist. | 5 | 2500 | 0 | 0 |
| 16 | C.Nagar Dist. | 1 | 500 | 0 | 0 |
| 17 | Kodagu Dist | 23 | 15000 | 0 | 0 |
| 18 | D.K Dist. | 312 | 154000 | 0 | 0 |
| 19 | U.K Dist | 252 | 127000 | 0 | 0 |
| 20 | Chikamagalur Dist. | 38 | 19000 | 0 | 0 |
| 21 | Udupi Dist. | 33 | 16500 | 0 | 0 |
| 22 | Davanagere Dist. | 86 | 46000 | 0 | 0 |
| 23 | Chitradurga Dist. | 451 | 22500 | 0 | 0 |
| 24 | Shimoga Dist. | 332 | 167000 | 0 | 0 |
| 25 | Haveri Dist. | 47 | 23500 | 0 | 0 |
| 26 | Belgaum Dist. | 11 | 5500 | 0 | 0 |
| 27 | Dharwad Dist. | 2 | 1000 | 0 | 0 |
| 28 | Vijayapura Dist. | 47 | 23500 | 0 | 0 |
| 29 | Bagalkot Dist. | 46 | 25000 | 0 | 0 |
| 30 | Gadag Dist. | 2 | 1000 | 0 | 0 |
| 31 | Bidar Dist. | 10 | 21500 | 0 | 0 |
| 32 | Gulbarga Dist. | 486 | 243000 | 0 | 0 |
| 33 | Yadgir Dist. | 6 | 3000 | 0 | 0 |
| 34 | Raichur Dist | 82 | 41000 | 0 | 0 |
| 35 | Koppal Dist. | 24 | 12000 | 0 | 0 |
| 36 | Bellary Dist. | 615 | 307500 | 0 | 0 |
| 37 | Vijayanagar Dist. | 82 | 41500 | 0 | 0 |
| | Total | 7011 | 3342200 | 0 | 0 |